ಕುಟುಂಬದ ನರ ನಾಡಿಯ ತುದಿಗೆಲ್ಲಿಂದಲೋ ಸಂಬಂಧ ಅಂತ ಹೇಳಿಕೊಳ್ಳುವ ವೆಂಕುಮಾವನ ಮಗನೇ ವಿನೋದ.

ವಿನೋದನಿಗಾಗಿ ನನ್ನನ್ನು ಕೇಳಿದಾಗ ನಾನು ದಣೀ ಓದು ಮುಗಿಸಿ ಹುಬ್ಬಳ್ಳಿಯಲ್ಲಿ ನೌಕರಿ ಹಿಡಿದು ಬದುಕಿನಲ್ಲೇನೋ ಸಾಧಿಸಿದ ಖುಷಿಯಲ್ಲಿದ್ದೆ. ನೌಕರಿ ಎಂದರೆ ನಾನೇ ಕಲ್ಪಿಸಿ ವಿಸ್ತರಿಸಿಕೊಂಡ ನನ್ನ ಸ್ವಾತಂತ್ರ್ಯದ ಪರಿಧಿ. ಅದು ಇನ್ಯಾರದ್ದೋ ಹಿಡಿತಕ್ಕೊಳಗಾಗಿ ಮೊಟಕಾಗುವಂತಹ ಯಾವ ಸನ್ನಿವೇಶ, ಘಟನೆಯೂ ನನಗಾಗ ಸಹ್ಯವಿರಲಿಲ್ಲ. ಏಕಮಾತ್ರ ಪುತ್ರ ವಿನೋದನೆಂದರೆ ವೆಂಕುಮಾವ ದಂಪತಿಗೆ ಸರ್ವಸ್ವ... ವೆಂಕುಮಾವ ಮತ್ತೆ ವೀಣತ್ತೆ ಸರ್ಪ ಕಾದಂತೆ ಕಾದು ವಿನೋದನನ್ನು ಮುದ್ದಿನಿಂದ ಬೆಳೆಸಲು ಕಾರಣವೂ ಇದೆ.

ವಿನೋದ ಹುಟ್ಟುವುದಕ್ಕೂ ಮುಂಚೆ ವೆಂಕುಮಾವ ಮತ್ತು ವೀಣತ್ತೆಗೆ ಒಂದು ಹೆಣ್ಣು ಮಗುವಿದ್ದಿತ್ತಂತೆ. ಒಮ್ಮೆ ಎಮ್ಮೇಟಿಯಲ್ಲಿ ವೆಂಕುಮಾವ ತನ್ನ ಮೂರ್ನಾಲ್ಕು ವರ್ಷದ ಪುಟ್ಟ ಮಗಳನ್ನು ಹಿಂದೆ ಕುಳಿಸಿಕೊಂಡು ಯಲ್ಲಾಪುರ ಜಾತ್ರೆಗೆ ಹೋಗಿ ಬರುತ್ತಿರುವಾಗ ಜಾತ್ರೆಯಲ್ಲಿ ಓಡಾಡಿ ಬಳಲಿದ ಮಗು ನಿದ್ರೆಗೆ ಜಾರಿರಬೇಕು. ಬೇಡ್ತಿ ನದಿಯ ಬ್ರಿಜ್ಜನ್ನು ದಾಟುವಾಗ ಹಂಪು ಹಾರುವ ಎಮ್ಮೇಟಿಯ ಧಡಕಿಗೆ ಮಗಳು ಕೆಳಗೆ ಬಿದ್ದುಬಿಟ್ಟಿದ್ದಳಂತೆ. ಗಾಡಿ ಓಡಿಸುತ್ತಿದ್ದ ವೆಂಕುಮಾವನಿಗೆ ಮೂರ್ನಾಲ್ಕು ಮೈಲು ಮುಂದೆ ಹೋದಮೇಲೆ ಅದು ಗಮನಕ್ಕೆ ಬಂದು ಗಾಡಿ ತಿರುಗಿಸಿಕೊಂಡು ಹುಡುಕುತ್ತ ಹೋಗುವವರೆಗೆ ಮಗಳು ಪ್ರಾಣಕಳೆದುಕೊಂಡಿದ್ದಳಂತೆ. ಈ ಆಘಾತದಿಂದ ವೆಂಕುಮಾವ ಅರೆಮಳ್ಳನಂತಾಗಿ ವೀಣತ್ತೆಯ ಪಡಿಪಾಟಲು ಯಾರಿಗೂ ಬೇಡ ಹಾಂಗಾಗಿತ್ತು ಅಂತ ಆಯಿ ಆಗಾಗ ಹೇಳುತ್ತಿರುತ್ತಿದ್ದಳು. ಅದಾದ ಸ್ವಲ್ಪ ವರ್ಷದ ಮೇಲೆ

